# ಆಹಾ ಸುದ್ದಿ!

★ ಸಸಿತೋಟ

ಇಂಗ್ಲೆಂಡ್‌ನ ಬಿಂಗ್‌ಹ್ಯಾಂ ಮೇಯರ್ ಫ್ರಾನ್ಸಿಸ್ ಹಾಡಿನ ಹಬ್ಬದಲ್ಲಿ ಜೋಕ್ ಮಾಡಲು ಹೋಗಿ ಮಹಿಳೆಯರ ಮುನಿಸು ಎದುರಿಸಬೇಕಾದ ಪರಿಸ್ಥಿತಿ ಬಂದಿದೆಯಂತೆ. 'ಫ್ಯಾಟ್ ಬಾಟಮ್ಡ್ ಗರ್ಲ್ಸ್' ಹಾಡಿಗೆ 'ನಮ್ಮೂರಿನ ಎಲ್ಲಾ ಹುಡುಗಿಯರ' ಹಾಡು ಎಂದರಂತೆ. ಕ್ಷಮೆ ಕೂಡಾ ಯಾಚಿಸದ ಫ್ರಾನ್ಸಿಸ್ ಮುಂದಿನ ಮೇಯರ್ ಚುನಾವಣೆ ನಂತರ ಮುಖವನ್ನೂ ತೋರಿಸದಂತೆ ಮಾಡುತ್ತೇವೆ ಎಂದಿದ್ದಾರಂತೆ ಬಿಗ್ ಬಾಟಮ್ಡ್ ಹುಡುಗಿಯರು.



ಅಮೆರಿಕಾದ ಬೋಸ್ಟನ್‌ನಲ್ಲಿ ಗಾಳಿ ಗುಳ್ಳೆಯ ಕವಚ ತೊಟ್ಟು ಆಡುವ ಫುಟ್ಬಾಲ್ ಜನಪ್ರಿಯವಂತೆ. ಆದರೆ ಇದು ಮನರಂಜನೆಗಿಂತ ಹೆಚ್ಚಾಗಿ ಒತ್ತಡ ಕಡಿಮೆ ಮಾಡುವ ತಂತ್ರ. ಅಲ್ಲಿಯ ಉದ್ಯೋಗಿಗಳು ಮಧ್ಯಾಹ್ನ ಊಟದ ಬಿಡುವಿನ ಸಮಯದಲ್ಲಿ ಈ ಆಟ ಆಡುವರಂತೆ. ಪಾಶ್ಚಾತ್ಯ ದೇಶಗಳಲ್ಲಿ ಕಾಲ್ಚೆಂಡಾಟ ಎಂದರೆ ಕಾಲಿನಿಂದ ಇನ್ನೊಬ್ಬ ಆಟಗಾರನನ್ನು ಒದೆಯುವ ಆಟ. ಅವರಿಗೆ ಈ ಗಾಳಿ ಗುಳ್ಳೆ ಪ್ರಯೋಜನಕ್ಕೆ ಬರಬಹುದು.

ಇಂಗ್ಲೆಂಡ್‌ನ ಬೆಡ್‌ಫೊರ್ಡ್‌ಶೈರ್‌ನಲ್ಲಿ ಇತ್ತೀಚೆಗೆ ಅಂತ್ಯ ಸಂಸ್ಕಾರಕ್ಕೆ ನಡೆದ ಮೆರವಣಿಗೆಯಲ್ಲಿ ಸಂಸ್ಕಾರ ನಿರ್ವಹಣಾ ಕಂಪೆನಿಯ ಉದ್ಯೋಗಿ ಸ್ಟಾರ್ ವಾರ್ ಸಿನಿಮಾದ ಪಾತ್ರದಂತೆ ಉಡುಗೆ ತೊಟ್ಟು ನಡೆದ. ಹ್ಯಾಲೋವೀನ್ ಶೈಲಿಯ ಅಂತ್ಯ ಸಂಸ್ಕಾರವಂತೆ. ಬಾಲಿವುಡ್ ಶೈಲಿ ಎಂದು ಬಯಸಿದರೆ ಭಾರತಕ್ಕೂ ಬೇಡಿಕೆ ಬರಬಹುದು.





ನ್ಯೂಯಾರ್ಕ್‌ನಲ್ಲಿ ಬೈಸಿಕಲ್ ಕಂಪೆನಿಯೊಂದು 160 ಜೋಡಿ ಅವಳಿಗಳನ್ನು ಕರೆಸಿ ಒಂದೇ ಬಾರಿ ಬೈಸಿಕಲ್ ಓಡಿಸುವ ಕಾರ್ಯಕ್ರಮ ಏರ್ಪಡಿಸಿತ್ತಂತೆ. ಬೈಸಿಕಲ್ ಓಡಿಸಿ ಗಿನ್ನೆಸ್ ದಾಖಲೆ ಸೃಷ್ಟಿಸಲು ಆಯೋಜಕರು ತಲೆ ಓಡಿಸಿದ್ದರು. ಆದರೆ ಗಿನ್ನೆಸ್ ತೀರ್ಪುಗಾರರು ಇದನ್ನು ತಿರಸ್ಕರಿಸಿದ್ದು, ಇನ್ನಷ್ಟು ಅವಳಿಗಳ ಸೃಷ್ಟಿಯಾಗುವವರೆಗೆ ಆಯೋಜಕರು ಕಾಯುವ ತೀರ್ಮಾನ ಕೈಗೊಂಡಿರಬಹುದು.

ಇಂಗ್ಲೆಂಡ್‌ನಲ್ಲಿ ಬರ್ಮಿಂಗ್‌ಹ್ಯಾಂ ಶೈಲಿಯ ಇಂಗ್ಲಿಷ್ ಉಚ್ಚಾರಿಸುವವರು ಕಡಿಮೆ ಬುದ್ಧಿವಂತರು ಎಂದು ಸಂಶೋಧನೆ ಹೇಳಿದೆಯಂತೆ. ಅಷ್ಟೇ ಆಗಿದ್ದರೆ ತೊಂದರೆ ಇರಲಿಲ್ಲ, ಆದರೆ ಆ ಶೈಲಿಯ ಉಚ್ಚಾರ ಮಾಡುವವರಿಗಿಂತ ಮೌನವಾಗಿರುವವರೇ ಹೆಚ್ಚು ಆಕರ್ಷಕರಾಗಿ ಕಾಣುತ್ತಾರೆ ಎಂದಿದ್ದಾರಂತೆ ತಜ್ಞರು. ಅದಕ್ಕೇ ಅಲ್ಲವೆ ಹೇಳುವುದು ಮೌನ ಬಂಗಾರ ಎಂದು.

ಕುಪ್ಪಳಿಸುವ ಕಪ್ಪೆಗೆ ನಿಧಾನ ನಡಿಗೆಯನ್ನು ಅನುಭವಿಸುವ ಅವಕಾಶ. ಇಂಡೋನೇಷ್ಯಾದ ಈ ಮರಗಪ್ಪೆಗೆ ಪೀಕ್ ಟೈಮಿನಲ್ಲಿ ಬಿಎಂಟಿಸಿ ಬಸ್ ಏರಿದ ಅನುಭವ ಆಗಿರಬಹುದು.

